೧೨ ಲಕ್ಷವಾಯಿತು. ಅವರು ಅಷ್ಟು ಹಣ ಖರ್ಚು ಮಾಡಿ ಹೋಗಿದ್ದರೆ ತಾವು ಅವರಿಗೆ ಕೊಟ್ಟಿರುವುದು ಕೇವಲ ೩,೪೦೦ ರೂಪಾಯಿಗಳು ಮಾತ್ರ. ಹೀಗಾದರೆ ತಾವು ಯಾವ ರೀತಿ ಹರಿಜನರನ್ನು ಉದ್ಧಾರ ಮಾಡಿದ ಹಾಗೆ ಆಗುತ್ತದೆ ಸ್ವಾಮಿ?

ಶ್ರೀ ಎಲ್. ಜಿ. ಹಾವನೂರ್.—ಒಬ್ಬ ವ್ಯಕ್ತಿ ೨೫ ರೂಪಾಯಿ ಖರ್ಚು ಮಾಡುತ್ತಾನೆ ಎಂಬುದು ತಮ್ಮ ಕಲ್ಪನೆ. ಇನ್ನು ನಾವು ಅಪ್ಲಿಕೇಷನ್ನಿಗೆ ಕೇವಲ ೧ ರೂಪಾಯಿ ವಸೂಲಿ ಮಾಡಿದ್ದೇವೆ. ಆದಕ್ಕಿಂತ ಹೆಚ್ಚಿಗೆ ವಸೂಲಿ ಮಾಡಿಲ್ಲ. ಮತ್ತೆ ಹರಿಜನರಲ್ಲಿ ಯಾರು ಹೊಸ ಉದ್ದಿಮೆಯಲ್ಲಿ ತರಬೇತಿ ಪಡೆದಿದ್ದಾರೆ ಮತ್ತು ಅದರಲ್ಲಿ ಅವರು ತಮ್ಮ ಜೀವನವನ್ನು ಸುಗುಮವಾಗಿ ನಡೆಸಿಕೊಂಡು ಹೋಗುವುದಕ್ಕೆ ಶಕ್ತಿ ಇದೆ ಅಂಥವರಿಗೆ ಮಾತ್ರ ಕೊಟ್ಟಿದ್ದೇವೆ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಅಲ್ಲ ಸ್ವಾಮಿ, ಒಬ್ಬರಿಗೆ ೨೫ ರೂಪಾಯಿ ಖರ್ಚಾಗುವುದಿಲ್ಲ ವೆಂದು ತಾವು ಹೇಳುತ್ತೀರಲ್ಲಾ, ಪಾಪ ಅವನು ಅನಕ್ಷರಸ್ಥ ಬರೀ ಅವನಿಗೆ ಅರ್ಜಿ ಬರೆದುಕೊಡುವುದಕ್ಕೇ ಅವನಿಂದ ೧೦ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಆದು ತಪ್ಪು ಅಲ್ಲವೇ? ಅದನ್ನು ಪರಿಶೀಲನೆ ಮಾಡಿ, ಇನ್ನು ಅವನ್ನು ಬಂದು ಹೋಗಬೇಕಾದರೆ ೫,೬ ರೂಪಾಯಿ ಚಾರ್ಜ್ ಕೊಡಬೇಕು ಮತ್ತಿತರೆ ಖರ್ಚು ಸೇರಿ ೨೫ ರೂಪಾಯಿಗಳು ಆಗಲಿಲ್ಲವೇ? ಇಷ್ಟು ಹಣವನ್ನು ಅವನ್ನು ಖರ್ಚು ಮಾಡಿದ ಹಾಗೆ ಆಗಲಿಲ್ಲವೇ? ತಾವು ಇಷ್ಟು ಅಗಾಧ ಪ್ರಮಾಣದಲ್ಲಿ ಅಪ್ಲಿಕೇಷನ್ ತರಿಸಿಕೊಂಡು ಹಣ ಮಾತ್ರ ಕಡಿಮೆ ಇಟ್ಟಿರುವುದು ತಪ್ಪಲ್ಲವೆ? ಎರಡನೆಯದಾಗಿ ಸೂಕ್ತವಾಗಿರತಕ್ಕ ಅರ್ಹರಾಗಿರತಕ್ಕಂಥವರಿಗೆ ಮಾತ್ರ ನೀಡುತ್ತೇವೆಂದು ಹೇಳಿದಿರಿ ಬಾಕಿ ೧೩ ಸಾವಿರ ಚಿಲ್ಲರೆ ಏನು ಹರಿಜನರಿದ್ದಾರೆ ಅವರು ಬಡವರು, ನಿರ್ಗತಿಕರು, ಅವರ ಬಗ್ಗೆ ಕೂಡ ತಾವು ಯೋಚನೆ ಮಾಡದೇ ಏತಕ್ಕೆ ಅವರ ಶೋಷಣೆ ಮಾಡುತ್ತೀರಿ ಅಂತ ಕೇಳುತ್ತೇನೆ.

ಶ್ರೀ ಎಲ್. ಜಿ. ಹಾವನೂರ್.—ಒಬ್ಬ ಬಡ ಹರಿಜನರಿಂದ ನಮ್ಮ ಮಾನ್ಯ ಸದಸ್ಯರು ಹರಿಜನರ ಬಗ್ಗೆ ಏನು ಅಂತಕರಣ ಪೂರ್ವಕವಾಗಿ ಮಾತನಾಡಿದರು, ಆದರೆ ಹರಿಜನರಿಗೆ ಒಂದು ಅಪ್ಲಿಕೇಷನ್ ಬರೆದು ಕೊಡುವುದಕ್ಕೇ ೧೦ ರೂಪಾಯಿಗಳನ್ನು ವಸೂಲಿ ಮಾಡಿದರು ಎಂದರೆ ಯಾರು ಹರಿಜನರನ್ನು ಶೋಷಣೆ ಮಾಡುತ್ತಿದ್ದಾರೆ ಎಂಬುದು ಅಲ್ಲಿಯೇ ಗೊತ್ತಾಗುತ್ತದೆ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ನಾನು ಮಾಡುತ್ತಿಲ್ಲ ಸ್ವಾಮಿ, ನಾನು ಮೇಲೆ ವರ್ಗದವನು ಅಲ್ಲ. ಹಾವನೂರ್ ವರದಿಯಂತೆ ನಾನು ಕೂಡ ಹಿಂದುಳಿದವನೇ, ಆದುದರಿಂದ ತಾವು ನೀವು ಅಂತ ನನಗೆ ಹೇಳಿದಿರಿ, ಆ ಪದವನ್ನು ಬಳಸುವ ಬದಲು ನಿಮ್ಮ ದಳ್ಳಾಳಿಗಳು ಅಂತ ಹೇಳಿಕೊಳ್ಳಿ.

Payment of Compensation for Lands acquired in Krishnarajpet Taluk.

463 SRI. S. M. LINGAPPA (Krishnarajpet)—Will the Minister for Minor Irrigation be pleased to state:—

(a) the extent of land acquired from the ryots for extention of Sri Rama devaru North Channel in Krishnarajpet Taluk;

(b) the number of years since the land was acquired from the ryots;

(c) the number of cases in respect of which compensation has been paid to the ryots who have lost their lands;

(d) the number of cases in respect of which compensation has not been paid?

SRI. D. B. CHANDREGOWDA(Minister for Minor Irrigation).—

(a) 76 Acres 16 Guntas.

(b) The land has been acquired from March, 1964 to August 1968 in a phased manner, as and when the works progressed.

(c) Out of the total 287 cases, compensation has been paid in respect of 116 cases.

(d) In 171 Cases.

ಶ್ರೀ ಎಸ್. ಎಂ, ಲಿಂಗಪ್ಪ.—ಕೊಡಬೇಕಾದಂಥ ಪರಿಹಾರಧನವೆಷ್ಟೇಬುದನ್ನು ತಿಳಿಸುತ್ತೀರಾ ?

† ಶ್ರೀ ಡಿ. ಬಿ. ಚಂದ್ರೇಗೌಡ.—ಪರಿಹಾರ ಧನದ ಮೊತ್ತ ೭ ಸಾವಿರದ ೭೬೨ ರೂಪಾಯಿಗಳು.

ಶ್ರೀ ಎಸ್. ಎಂ. ಲಿಂಗಪ್ಪ.—ಈಗ ಪಾವತಿ ಆಗಿರತಕ್ಕ ಪ್ರಕರಣಗಳಲ್ಲಿ ಎಷ್ಟೆಷ್ಟು ಹಣವನ್ನು ಪಾವತಿ ಮಾಡಿದ್ದೀರಿ?

ಶ್ರೀ ಡಿ. ಬಿ. ಚಂದ್ರೇಗೌಡ.—ಹಣ ಎಷ್ಟೆಷ್ಟು ಪಾವತಿ ಆಗಿದೆ ಎನ್ನುವ ಬಗ್ಗೆ ವಿವರ ನನ್ನ ಹತ್ತಿರ ವಿಲ್ಲ. ಬೇರೆ ಪ್ರಶ್ನೆ ಹಾಕಿದರೆ ಹೇಳುತ್ತೇನೆ.

ಶ್ರೀ ಎಸ್. ಎಂ. ಲಿಂಗಪ್ಪ.—ಕೊಡಬೇಕಾದಂಥ ಪ್ರಕರಣಗಳಲ್ಲಿ ಕೆಲವರಿಗೆ ಇಷ್ಟು ಹಣ ಕೊಟ್ಟಿದ್ದೇವೆಂದು ಹೇಳಿದ್ದೀರಿ ಮತ್ತೆ ಕೆಲವರಿಗೆ ಕೊಡಬೇಕಾಗಿದೆಂದು ಹೇಳಿದ್ದೀರಿ, ಆದರೆ ಇದು ಆಗಿ ೧೫ ವರ್ಷಗಳಾಗುತ್ತಾ ಬಂತು; ಅವರೆಲ್ಲಾ ಸಣ್ಣ ಹಿಡುವಳಿ ರೈತರಾಗಿದ್ದಾರೆ, ಇಷ್ಟು ದೀರ್ಘಾವಧಿ ಆಗುತ್ತಾ ಬಂದಿದ್ದರೂ ಅವರಿಗೆ ಪರಿಹಾರಧನವನ್ನು ಪಾವತಿ ಮಾಡದೇ ಇರುವುದಕ್ಕೆ ತೊಂದರೆ ಏನು ಎಂಬುದನ್ನು ತಿಳಿಸುತ್ತೀರಾ?

ಶ್ರೀ ಡಿ. ಬಿ ಚಂದ್ರೇಗೌಡ.—ಹಣ ಕೊಡುವುದರಲ್ಲಿ ತಡವಾಗಿದೆ ಮತ್ತು ಆದರಿಂದ ಅವರಿಗೆ ತೊಂದರೆಯಾಗಿದೆನೆಂಬುದನ್ನು ಒಪ್ಪುತ್ತೇನೆ. ಆದರೆ ನಾವು ಕೊಡುವುದರಲ್ಲಿ ಅವರಿಗೆ ತಡವಾಗಿಲ್ಲ, ಅವರಿಗೆ ಹಣ ಕೊಡಬೇಕೆಂದು ಏನು ಅವಾರ್ಡ್ ಪಾಸ್ ಮಾಡಿದ್ದಾರೆ, ಅದಕ್ಕೆ ಬೇಕಾದಂಥ ಮಾಹಿತಿಯನ್ನು ಯಾರು ಹಣವನ್ನು ಪಡೆಯುತ್ತಾರೋ ಅವರು ಒದಗಿಸಿಕೊಡಬೇಕಾಗುತ್ತದೆ ಅವರು ಹಾಗೆ ಒದಗಿಸಿ ಕೊಡದೇ ಇರುವುದರಿಂದ ಪಾವತಿಗೆ ನಿಧಾನವಾಗಿದೆ.

ಶ್ರೀ ಎಸ್. ಎಂ. ಲಿಂಗಪ್ಪ.—ಇನ್ನು ಇಷ್ಟು ಅವಧಿಯೊಳಗೆ ಅವರಿಗೆಲ್ಲಾ ಪರಿಹಾರಧನವನ್ನು ಸರ್ಕಾರ ಕೊಡುತ್ತದೆಂಬುದರ ಬಗ್ಗೆ ಭರವಸೆ ಕೊಡುತ್ತೀರಾ?

ಶ್ರೀ ಡಿ. ಬಿ, ಚಂದ್ರೇಗೌಡ.— ನಾನು ಆಗಲೇ ಹೇಳಿದ ಹಾಗೆ ಅವರು ಎಷ್ಟು ಬೇಗ ದಾಖಲಾತಿಗಳನ್ನು ಒದಗಿಸಿಕೊಡುತ್ತಾರೋ ಅಷ್ಟು ಬೇಗ ಹಣ ಒದಗಿಸಿಕೊಡುವುದಕ್ಕೆ ತಯಾರಾಗಿದ್ದೇವೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

MR. SPEAKER.—Now held over Question No. 782, but the member is absent. Now the Question Hour is over.